# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 414 (362)
ಸದಸ್ಯರ ಹೆಸರು : ಡಾ: ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 19-08-2026
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಮಳೆಗಾಲ ಆರಂಭವಾಗಿ 3ನೇ ತಿಂಗಳು ಚಾಲ್ತಿಯಲ್ಲಿದ್ದು, ವಾಡಿಕೆಯಷ್ಟು ಮಳೆಯಾಗಿಲ್ಲದಿರುವುದರಿಂದ ಜನ ಜಾನುವಾರು, ನೀರು ಮೇವಿಗಾಗಿ ಪರದಾಡುತ್ತಿದ್ದು, ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | 2026 ಆಗಸ್ಟ್ 18 ರಂತೆ ಬೀದರ್ ಜಿಲ್ಲೆಯ 4 ತಾಲೂಕುಗಳ ಒಟ್ಟು 22 ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದೆ. ಒಟ್ಟಾರೆಯಾಗಿ, 28 ಹಳ್ಳಿಗಳಿಗೆ 2 ಟ್ಯಾಂಕರ್‌ಗಳು ಹಾಗೂ 33 ಬಾಡಿಗೆ ಕೊಳವೆಬಾವಿಗಳ (ಬೋರ್‌ವೆಲ್‌ಗಳು) ಮೂಲಕ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ.<br><br>ರಾಜ್ಯದಲ್ಲಿ 154 ಲಕ್ಷ ಟನ್ ಮೇವು ಲಭ್ಯವಿದ್ದು, ಇದು ಸರಿಸುಮಾರು 34 ವಾರಗಳಿಗೆ ಸಾಕಾಗುತ್ತದೆ. ಬೀದರ್ ಜಿಲ್ಲೆಯಲ್ಲಿ ಒಟ್ಟು 1.97 ಲಕ್ಷ ಟನ್ ಮೇವು ಲಭ್ಯವಿದ್ದು, 22 ವಾರಗಳಿಗೆ ಸಾಕಾಗುತ್ತದೆ. ಹುಲಸೂರು, ಚಿಟಗುಪ್ಪ, ಹುಮ್ನಾಬಾದ್ ಮತ್ತು ಬಾಲ್ಕಿ ತಾಲ್ಲೂಕುಗಳಲ್ಲಿ 15 ರಿಂದ 18 ವಾರಗಳಿಗೆ ಆಗುವಷ್ಟು ಮಾತ್ರ ಮೇವು ಲಭ್ಯವಿರುತ್ತದೆ. ತುರ್ತು ಯೋಜನೆಗಳ ತಯಾರಿ, ಮೇವಿನ ಲಭ್ಯತೆಯ ನಿರಂತರ ಉಸ್ತುವಾರಿ ಮತ್ತು VB-GRAM-G ಅಡಿಯಲ್ಲಿ ಸಮುದಾಯ ಮೇವು ಅಭಿವೃದ್ಧಿಯ ಮೂಲಕ ಮೇವಿನ ಪೂರೈಕೆಯನ್ನು ಹೆಚ್ಚಿಸಲಾಗುತ್ತಿದೆ. ಹಸಿರು ಮೇವು ಬೇಸಾಯವನ್ನು ಉತ್ತೇಜಿಸಲು ಮತ್ತು ಜಾನುವಾರು ಆಧಾರಿತ ಜೀವನೋಪಾಯವನ್ನು ಸುಸ್ಥಿರಗೊಳಿಸಲು, ಖಚಿತ ನೀರಾವರಿ ಸೌಲಭ್ಯ ಹೊಂದಿರುವ ರೈತರಿಗೆ ಉಚಿತವಾಗಿ ನೀಡಲಾಗುವ ಮೇವು ಕಿಟ್‌ಗಳ (fodder kits) ಸಂಗ್ರಹಣೆ ಮತ್ತು ವಿತರಣೆಗಾಗಿ ಸರ್ಕಾರವು ರೂ. 25 ಕೋಟಿ ಬಿಡುಗಡೆ ಮಾಡಲಾಗುತ್ತಿದೆ. |
| ಆ) | ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಿ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | 'ಬರ ನಿರ್ವಹಣಾ ಕೈಪಿಡಿ 2020' ರಲ್ಲಿ (Manual for Drought Management 2020) ನೀಡಿರುವ ಮಾರ್ಗಸೂಚಿಗಳಂತೆ ಬರ ಮೌಲ್ಯಮಾಪನ ಮತ್ತು ಘೋಷಣೆಗೆ ವಸ್ತುನಿಷ್ಠ, ಪಾರದರ್ಶಕ ಮತ್ತು ಸಾಕ್ಷ್ಯ ಆಧಾರಿತ ವಿಧಾನವನ್ನು ಅನುಸರಿಸಿ ಕಡ್ಡಾಯ ಸೂಚಕಗಳಾದ ಮಳೆ ಕೊರತೆ ಅಥವಾ ಒಣಹವೆ, ಬಿತ್ತನೆ ಪ್ರಗತಿ, ಉಪಗ್ರಹ ಆಧಾರಿತ ರಿಮೋಟ್ ಸೆನ್ಸಿಂಗ್-ಆಧಾರಿತ ಸಸ್ಯವರ್ಗದ ಸೂಚ್ಯಂಕಗಳು, ಮಣ್ಣಿನ ತೇವಾಂಶ ಸೂಚ್ಯಂಕಗಳು ಮತ್ತು ಜಲವಿಜ್ಞಾನದ |

| | | |
|---|---|---|
| | | ಸೂಚಕಗಳ ಅಧ್ಯಯನ ನಡೆಸಿ ಮೊಬೈಲ್ ಆ್ಯಪ್ ಬಳಸಿ ಸ್ಥಳ ಪರಿಶೀಲನೆ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>'ಬರ ನಿರ್ವಹಣಾ ಕೈಪಿಡಿ 2020' ರಲ್ಲಿ ನಿಗದಿಪಡಿಸಲಾದ ಬರ ಮಾನದಂಡಗಳ ಪ್ರಕಾರ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC) ಸಂಸ್ಥೆಯು ಜೂನ್ 1 ರಿಂದ ಆಗಸ್ಟ್ 12 ರವರೆಗೆ ಕೈಗೊಂಡಿರುವ ವೈಜ್ಞಾನಿಕ ಮೌಲ್ಯಮಾಪನ ವರದಿಯನ್ವಯ ಪ್ರಸ್ತುತ ಒಟ್ಟು 102 ತಾಲ್ಲೂಕುಗಳು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಲು ಅರ್ಹತೆ ಪಡೆದಿರುತ್ತವೆ. ಮತ್ತು ಸದರಿ ವೈಜ್ಞಾನಿಕ ಮೌಲ್ಯಮಾಪನ ಕಾರ್ಯವು ನಿರಂತರ ಪ್ರಕ್ರಿಯೆಯಾಗಿದ್ದು, 2026 ರ ಮುಂಗಾರು ಹಂಗಾಮಿನ ಅಂತ್ಯದವರೆಗೆ ಮುಂದಿನ ಸಾಪ್ತಾಹಿಕ ಮೌಲ್ಯಮಾಪನಗಳ ಆಧಾರದ ಮೇಲೆ ಅರ್ಹತೆ ಪಡೆಯುವ ತಾಲ್ಲೂಕುಗಳಲ್ಲಿ Ground Truthing ಪ್ರಕ್ರಿಯೆಯನ್ನು ಕೈಗೊಂಡು ಬರಪೀಡಿತ ತಾಲ್ಲೂಕುಗಳ ಘೋಷಣೆಯ ಬಗ್ಗೆ ಕ್ರಮ ವಹಿಸಲಾಗುವುದು.<br><br>ಬರಪೀಡಿತ ತಾಲ್ಲೂಕುಗಳ ಘೋಷಣೆಯ ನಂತರ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಬೆಳೆ ಹಾನಿಯ ಕುರಿತು ಜಂಟಿ ಸಮೀಕ್ಷೆ ನಡೆಸಿ ನೀಡುವ ವರದಿಯ ಮೇರೆಗೆ ಜಿಲ್ಲಾಧಿಕಾರಿಗಳು ನಿಯಮಾನುಸಾರ ಪರಿಶೀಲನೆ ನಡೆಸಿ ನೀಡುವ ದೃಢೀಕರಣದನ್ವಯ ಕೇಂದ್ರ ಗೃಹಮಂತ್ರಾಲಯದ ದಿನಾಂಕ: 11.07.2023ರ ಮಾರ್ಗಸೂಚಿಗಳನ್ವಯ ಬೆಳೆಹಾನಿಯ ಇನ್ಪುಟ್ ಸಬ್ಸಿಡಿಯನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಡಿ.ಬಿ.ಟಿ. ಮುಖಾಂತರ ಪಾವತಿಸಲಾಗುವುದು. |

ಸಂಖ್ಯೆ: ಕಂಇ 703 ಟಿಎನ್ಆರ್ 2026

(ಡಾ|| ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಯವರು ಹಾಗೂ
ಕಂದಾಯ ಸಚಿವರು